ಅಸಲು ದಾವೆ ನಂಃ 32/2018 ಡಿ ಡಬ್ಲ್ಯೂಃ1-ಮಲ್ಲನಗೌಡ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 13/02/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ AMM ವಕೀಲರಿಂದಃ**

ನಾನು ದಾವೆಯಲ್ಲಿ ಕೈಪಿಯತ್ತು ಹಾಕಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಜಿ ಪಿ ಎ ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ವಾದಿಯ ತಂದೆಯ ಹೆಸರು ಶಂಕ್ರಪ್ಪ. ಅವರು 1964-65 ರಲ್ಲಿ ತೀರಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾಯಿ ವಾದಿ 12 ವರ್ಷದವನು ಇದ್ದಾಗ ತೀರಿಕೊಂಡಳು ಎಂದರೆ ನನಗೆ ಗೊತ್ತಿಲ್ಲ. ವಾದಿಯನ್ನು ನೋಡಿಕೊಳ್ಳಲು ಯಾರು ಇರದೇ ಇದ್ದಾಗ, ಆತ ಕೆಲಸ ಹುಡುಕಿಕೊಂಡು ಊರು ಬಿಟ್ಟು ದೇಶಾವಾರಿ ಕೂಲಿ ಮಾಡಲು ಹೋಗುತ್ತಿದ್ದಾಗ ಎಂದರೆ ಸಾಕ್ಷಿ ಅತ ಕೌಜಗೇರಿಯಲ್ಲಿ ತನ್ನ ಸಂಬಂಧಿಕರ ಮನೆಯಲ್ಲಿ ಇದ್ದಾ ಎಂದು ಹೇಳುತ್ತಾರೆ. ತಂಟೇದ ಆಸ್ತಿಯನ್ನು ನೋಡಿದ್ದೇನೆ. ಹಿತ್ತಲು ಜಾಗ 28X36 ಪೂಟ್ ಇದೆ, ಹಾಗೂ ಮನೆಯ ಜಾಗ ಎಷ್ಟು ಇದೆ ಎಂದು ನನಗೆ ನೆನಪಿಲ್ಲ. ಸಾಕ್ಷಿ ಮನೆಯ ಜಾಗ 16X28 ಪೂಟ್ ಇದೆ ಎಂದು ಹೇಳುತ್ತಾರೆ. ಹಾಲಪ್ಪನಿಗೆ ತಂಟೇದ ಜಾಗವನ್ನು ಮಾರಾಟ ಮಾಡುವ ಹರಕತ್ತು ಇರಲಿಲ್ಲಾ ಎಂದರೆ ಸರಿಯಲ್ಲ. ಆತ ಹೊಲ ಮನೆಯನ್ನು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಂಟೇದ ಆಸ್ತಿಗೆ 1 ನೇ ಪ್ರತಿವಾದಿಯ ಹೆಸರು 1974 ರಲ್ಲಿ ದಾಖಲು ಆಯಿತು. 1 ನೇ ಪ್ರತಿವಾದಿ ನಮ್ಮ ದೊಡ್ಡಪ್ಪ. ನನ್ನ ದೊಡ್ಡಪ್ಪ 1972-73 ರಲ್ಲಿ ಖೊಟ್ಟಿಯಾಗಿ ದಾಖಲು ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ನಿಪಿ-5 ಉತಾರವನ್ನು ನೋಡುತ್ತಿದ್ದೇನೆ, ಅದರಲ್ಲಿ 1972-73 ರಲ್ಲಿ ಭೀಮನಗೌಡ ಹನಮಪ್ಪ ನಾಡಗೌಡ್ರ ಇವರ ಹೆಸರಿನಲ್ಲಿ ದಾಖಲು ಆಗಿದೆ ಎಂದರೆ ನಿಜ. ಆಸ್ತಿ ನಂಬರ 216 ಹಿತ್ತಲು ಜಾಗ 1972-73 ರಲ್ಲಿ 1 ನೇ ಪ್ರತಿವಾದಿ ನಮ್ಮ ದೊಡ್ಡಪ್ಪನ ಹೆಸರಿಗೆ ದಾಖಲು ಆಗಿದೆ ಎಂದರೆ ನಿಜ. ಎರಡು ಆಸ್ತಿಗಳನ್ನು 1973-74 ರಲ್ಲಿ 1 ನೇ ಪ್ರತಿವಾದಿ ನಮ್ಮ ದೊಡ್ಡಪ್ಪ ಖರೀದಿ ಮಾಡಿದ್ದಾರೆ. ನಿಡಿ- 2 ಖರೀದಿ ಪತ್ರ ನೋಡುತ್ತಿದ್ದು, ಅದರಲ್ಲಿ ದಿನಾಂಕ 26/03/1974 ರಲ್ಲಿ ಖರೀದಿ ಮಾಡಿದ್ದಾಗಿದೆ ಎಂದರೆ ನಿಜ. ಪಂಚಾಯತಿ ಅಧಿಕಾರ ಜೊತೆ ಮಿಲಾಪೆಯಾಗಿ ನಾವು ಖರೀದಿ ಮಾಡುವ ಪೂರ್ವದಲ್ಲಿಯೇ ಪಂಚಾಯತಿಯಲ್ಲಿ ಉತಾರವನ್ನು ನಮ್ಮ ಹೆಸರಿಗೆ ಹಚ್ಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಉತಾರವನ್ನು ಮೊದಲು ಹಚ್ಚಿಕೊಂಡು ನಂತರ ಒಂದು ಸುಳ್ಳು ಖರೀದಿ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಯಾವತ್ತು ದಾವಾ ಆಸ್ತಿಯನ್ನು ಮಾರಾಟ ಮಾಡಿಲ್ಲ ಮತ್ತು ನಿಡಿ-2 ಖರೀದಿ ಪತ್ರದಲ್ಲಿ ಇರುವ ಸಹಿ ವಾದಿಯದು ಅಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯದ ಮುಂದೆ ಬಂದರೇ ಆತ ಸತ್ಯವನ್ನು ಹೇಳುತ್ತಾನೆ ಎಂದು ನಾನು ಆತನ ಬದಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1986 ರಲ್ಲಿ ಹುಟ್ಟಿದ್ದೇನೆ. ನಾನು ಖರೀದಿ ವ್ಯವಹಾರದಲ್ಲಿ ಭಾಗವಹಿಸಿಲ್ಲ, ನನ್ನ ದೊಡ್ಡಪ್ಪ ನನಗೆ ಹೇಳಿದ್ದಾರೆ. ನನ್ನ ದೊಡ್ಡಪ್ಪ ಚಿಕ್ಕಮಣ್ಣೂರಿನಲ್ಲಿ ಇರುತ್ತಾರೆ, ಅವರಿಗೆ 90 ವರ್ಷ ವಯಸ್ಸು ಆಗಿದೆ, ಅವರಿಗೆ ಕಿವಿ ಕೇಳುವುದಿಲ್ಲ, ಅವರಿಗೆ ಮಕ್ಕಳು ಇರುತ್ತಾರೆ. ಸದರಿ ಜಾಗದಲ್ಲಿ ಯಾರು ವಾಸವಾಗಿಲ್ಲ. ಮನೆಯ ಜಾಗದಲ್ಲಿ ನಮ್ಮ ಕಾಕನ ಹೆಸರಿನಲ್ಲಿ ನಾನು ಸಣ್ಣವನಿದ್ದಾಗ ಒಂದು ಮನೆ ನಿರ್ಮಾಣವಾಗಿದೆ. ನನ್ನ ಕಾಕ ತೀರಿಕೊಂಡಿದ್ದು, ಆ ಮನೆಯಲ್ಲಿ ಯಾರು ವಾಸವಾಗಿಲ್ಲ. ಹಿತ್ತಲು ಜಾಗ ಹಾಗೇ ಖುಲ್ಲಾ ಇದೆ. ನನ್ನ ಮನೆ ಚಿಕ್ಕಮಣ್ಣೂರಿನಲ್ಲಿಯೇ ಬೇರೆ ಓಣಿಯಲ್ಲಿ ಇದೆ. ದಾವಾ ಆಸ್ತಿಯಲ್ಲಿ ಯಾರು ವಾಸವಾಗಿರುವುದಿಲ್ಲ. ಸಾಕ್ಷಿ ಬೇರೆಯವರ ಮಾತು ಕೇಳಿ ಈ ದಾವೆ ಮಾಡಿದ್ದಾಗಿ ಹೇಳುತ್ತಾರೆ. ವಾದಿ ಯಾರ ಮಾತ ಕೇಳಿ ದಾವೆ ಮಾಡಿದ್ದಾನೆ ಎಂದು ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ತನ್ನ ಹೆಸರಿಗೆ ಹಚ್ಚಿಕೊಂಡ ಬಗ್ಗೆ ಗ್ರಾಮ ಪಂಚಾಯತಿ ಠರಾವನ್ನು ಹಾಜರುಮಾಡಲು ಆಗುತ್ತದೆ.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.